Sri Kadidal MANJAPPA.—There is no such thing like taking leave by a Minister.

ಶ್ರೀ ಜೆ. ಮಹಮ್ಮದ್ ಇಮಾಂ.—ಖಾನಗಿ ಕೆಲಸ ಕಾರ್ಯಗಳ ಸಂಬಂಧದಲ್ಲಿ ಹೋದಾಗ ಸರ್ಕಾರದ ಕೆಲಸವನ್ನೇನೂ ಮಾಡಲಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.-ಅದನ್ನೂ ಮಾಡಿದ್ದೇವೆ.

ಶ್ರೀ ಜೆ. ಮಹಮ್ಮದ್ ಇಮಾಂ —ವೈಕುಂಠದಲ್ಲಿ ಏನೇನು ನಡೆಯುತೆಂಬುದನ್ನು ಹೇಳುತ್ತೀರಾ ? ವೈಕುಂಠ ಯಾತ್ರೆ ಮಾಡುವಾಗ ಪ್ರಯಾಣ ಭತ್ಯೆ ಕೊಡ ಬೇಕೆ, ಬೇಡವೆ ?

ಶ್ರೀ ಕಡಿದಾಳ್ ಮಂಜಪ್ಪ.—ನಾವು ಅದನ್ನು ಕೇಳಿಲ್ಲ.

ಶ್ರೀ ಜೆ. ಮಹಮ್ಮದ್ ಇಮಾಂ.—ಈ ಸಭೆಯಿಂದ ಅಲ್ಲಿಗೆ ಇನ್ನೂ ಯಾರು ಯಾರು ಬಂದಿದ್ದರು ?

Mr. SPEAKER.—A number of persons had gone there; how can the Minister name those persons ?

ಶ್ರೀ ಜೆ. ಮಹಮ್ಮದ್ ಇಮಾಂ.—ಅಲ್ಲ ಸರ್ಕಾರಿ ಕೆಲಸ ಮಾಡಿದ್ದೇವೆಂದು ಹೇಳಿದಿರಿ. ಏನೇನು ಮಾಡಿದ್ದೀರೆಂಬುದನ್ನು ಹೇಳಬಲ್ಲರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅಲ್ಲ ಪ್ರಜೆಗಳ ಅಹವಾಲನ್ನು ಕೇಳಿದೆವು, ಇನ್‌ಸ್ಪೆಕ್ಷನ್ ಇತ್ತು.

ಶ್ರೀ ಜೆ. ಮಹಮ್ಮದ್ ಇಮಾಂ.—ವೈಕುಂಠದಲ್ಲಿ ಅಖಿಲ ಕರ್ಣಾಟಕ ಆಗಬೇಕೆ, ಬೇಡವೆ ಎಂಬುದನ್ನು ಚರ್ಚೆ ಮಾಡಿದಿರಾ ?

(ಉತ್ತರವಿಲ್ಲ.)

ಶ್ರೀ ಮುಲ್ಕ ಗೋವಿಂದರೆಡ್ಡಿ.— ಹಿಂದೆ ಮಂತ್ರಿಗಳು ಸೆಕ್ರೆಟರಿಯಟ್ಟಿನಲ್ಲಲ್ಲದಿದ್ದಾಗ Secretariat appeared like a desert, ಪ್ರೇತಕಳೆ ಎಂದು ಪತ್ರಿಕೆಯಲ್ಲಿ ಬರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನಾನು ಅದನ್ನು ಓದಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ರೂಲ್ಸ್ ಪ್ರಕಾರ ಎಲ್ಲಾ ಮಂತ್ರಿಗಳೂ ಒಂದೇಸಲ ಟೂರ್ ಹೋಗ ಬಾರದು, ಹೆಡ್‌ಕ್ವಾರ್ಟರ್ಸ್‌ರು ಬಿಟ್ಟುಹೋಗಬಾರದು, ಒಬ್ಬರಾದರೂ ಹೆಡ್‌ಕ್ವಾರ್ಟರಿನಲ್ಲಿರಬೇಕು ಎಂದು ನಿಯಮವಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ —ಸಂಸ್ಥಾನದಲ್ಲಿರ ಬಹುದು, ಸಂಸ್ಥಾನ ಬಿಟ್ಟು ಹೊರಗೆ ಹೋಗಿಲ್ಲ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ವೈಕುಂಠಕ್ಕೆ ಹೋಗಿದ್ದಾಗ ಹಾಗೆಯೇ ಮೂರು ಮಂದಿ ಕೈರಾನಕ್ಕೆ ಹೋಗಿದ್ದುದು ನಿಜವೆ ?

(ನಗು ; ಉತ್ತರವಿಲ್ಲ.)

International Conference at Toronto (Delegates from Mysore).

Q.—117. Sri S. SRINIVASA IYENGAR (T.-Narsipur).—

Will the Government be pleased to state :—

(*a*) whether any delegate was deputed from the Government of Mysore for the International Conference at Toronto held recently ;

(*b*) if so, the name of the delegate and the amount of money spent ;

(*c*) whether the delegate has returned ;

(*d*) if so, whether a copy of the report submitted by him would be furnished ?

A.—Sri Kadidal MANJAPPA (Minister for Revenue and Public Works) [On behalf of SRI K. HANUMANTHAIYA (Chief Minister)].—

(*a*) Yes. Three delegates.

(*b*) Sri T. Siddalingiah was deputed by this Government but the T.A. Bills are not as yet received. Miss P. K. Varalakshmi and Smt. M. R. Lakshamma who were in Canada and U.S.A. at the time were deputed to attend the Conference without any extra cost to Government.

(*c*) Yes.

(*d*) It is not usual or necessary to obtain reports from the delegates.

Sri S. SRINIVASA IYENGAR.—Will the Government be pleased to state whether Sri T. Siddalingiah, a delegate of Mysore, attended the conference ?

Sri Kadidal MANJAPPA.—Yes.

Sri S. SRINIVASA IYENGAR.—May we know what transpired there ?

Sri Kadidal MANJAPPA.—He participated in that conference.

Sri S. SRINIVASA IYENGAR.—May I know why Government have said that it is not necessary to obtain a report ?

Sri Kadidal MANJAPPA.—It is not necessary. We will receive the proceedings of the Conference in due course ; therefore, it is not necessary to call for a report from the delegate.

Sri S. SRINIVASA IYENGAR.—May I know whether the delegate toured England and other countries ?

Sri Kadidal MANJAPPA.—I am doubtful.

Sri S. SRINIVASA IYENGAR.—Does the Government of Mysore meet the bill of this tour ?

Sri Kadidal MANJAPPA.—No.

Sri S. SRINIVASA IYENGAR.—May I know why this Miss Varalakshmi was at Canada during the time of the Conference ?

Sri Kadidal MANJAPPA.—She is a Damodardas Scholarship student; she was studying there.

Sri S. SRINIVASA IYENGAR.—Did this Miss Varalakshmi attend the conference, Sir ?

Sri Kadidal MANJAPPA.—Yes.

Sri Mulka GOVINDA REDDY.—What are the qualifications of Miss Varalakshmi to attend this conference ?

Sri Kadidal MANJAPPA.—She is a scholar studying there. She wrote to Government of Mysore that she desired to attend the conference. After all, it was a social conference. There was no objection to permit her to attend.

Educational Reforms (expenditure incurred).

Q.—27. Sri B. N. BORANNA GOWDA (Belur).—

Will the Government be pleased to state:—

(*a*) the total amount spent up to the end of August 1954 for education reforms ;

(*b*) the amount spent for paying the T. A. and D. A. for members attending the meetings ;

(*c*) the amount spent for printing and publications ;

(*d*) the amount spent for Officers in the Education Department to meet D. A. and T. A. ?

A.—Sri A. G. RAMACHANDRA RAO (Minister for Law and Education).—

	Year	*Rs.*	*a.*	*p.*
(*a*)	1952-53	31,070	14	0
	1953-54	325	0	0
	1954-55 (July)	440	3	0
	Total ...	31,836	1	0

(*b*) Rs. 26,641—15 –0.

(*c*) The report has been treated as a Government publication and as such the cost on printing is not incurred by the Education Department.

(*d*) Rs. 3,170-2-0.

Sri B. N. BORANNA GOWDA.—May I know the amount sanctioned for this conference ?

Sri A. G. RAMACHANDRA RAO.—I want notice.

Sri B. N. BORANNA GOWDA.—Did you spend any more money for this ?

Sri A. G. RAMACHANDRA RAO.—If necessary, we have to.

ಶ್ರೀ ಬಿ. ಹುಚ್ಚೇಗೌಡ.—ಈ ಸುಧಾರಣೆಯನ್ನು ಯಾವಾಗ ಜಾರಿಗೆ ತರುವುದು ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೆಲವು ಜಾರಿಗೆ ಬಂದಿದೆ. ಇನ್ನು ಕೆಲವು ಬರುವುದರಲ್ಲಿವೆ.

ಶ್ರೀ ಬಿ. ಹುಚ್ಚೇಗೌಡ.—ಪೂರ್ಣವಾಗಿ ಇದನ್ನು ಜಾರಿಗೆ ಕೊಡುವುದು ಯಾವಾಗ ?

ಶ್ರೀ ಎ. ಜಿ. ರಾಮಚಂದ್ರರಾವ್.—ಒಂದೊಂದಾಗಿ ಬರುತ್ತವೆ.

ಶ್ರೀ ಟಿ. ಮರಿಯಪ್ಪ.—ಈ ವರ್ಷ ಯಾವಯಾವ ಭಾಗ ಜಾರಿಗೆ ಬಂದಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಲ್. ಎಸ್. ಪಬ್ಲಿಕ್ ಪರೀಕ್ಷೆಯನ್ನು ರದ್ದುಮಾಡಿದೆ, ಏಜ್ ಆಫ್ ಸೂಪರ್‌ಆನ್ಯುಯೇಷನ್ ಆಫ್ ಟೀಚರ್ಸ್ ನಿಗದಿ ಮಾಡಿದೆ.

ಶ್ರೀ ಟಿ. ಮರಿಯಪ್ಪ.—ಪ್ಯಾಟ್ರನ್ ಆಫ್ ಏಜು ಕೇಷನ್ ಏನಿರಬೇಕೆಂದು ತೀರ್ಮಾನಮಾಡಿ ಜಾರಿಗೆ ಕೊಟ್ಟಿದ್ದೀರಿ ?

Sri A. G. RAMACHANDRA RAO.—It is under consideration.

ಶ್ರೀ ಎಸ್. ಗೋಪಾಲಗೌಡ.—ವಿದ್ಯಾ ಸುಧಾರಣೆಯ ವಿಚಾರದಲ್ಲಿ ಕ್ಯಾಬಿನೆಟ್‌ನಲ್ಲಿ ವಿದ್ಯಾ ಮಂತ್ರಿಗಳಿಗೂ ಇತರರಿಗೂ ಭಿನ್ನಾಭಿಪ್ರಾಯ ಬಂದಿರುವುದು ನಿಜವೇ ?

Mr. SPEAKER.—It is not a proper supplementary.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈಗ ಕೈಕೊಳ್ಳಬೇಕೆಂದಿರುವ ವಿದ್ಯಾ ಸುಧಾರಣೆಯ ವಿಚಾರದಲ್ಲಿ ಮೊಟ್ಟ ಮೊದಲು ಪ್ರೈಮರಿ ವಿದ್ಯಾಭ್ಯಾಸದ structure ಬದಲಾಯಿಸುವವರೆಗೆ ತಮ್ಮ ಯೋಜನೆಯು ಕಾರ್ಯಗತವಾಗಿ ಜಯಪ್ರದವಾಗುವುದಿಲ್ಲ ವೆಂಬುದು ಸರ್ಕಾರದ ಅಭಿಪ್ರಾಯವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ.

Sri Mulka GOVINDA REDDY.—Are the Government aware that this superannuation would enlarge or deepen unemployment in the State ?

Sri A. G. RAMACHANDRA RAO.—No. The ratio between the total number of the unemployed and the number to be employed under the scheme is so small that I do not think it will affect unemployment in the State.

Mr. SPEAKER.—Question hour is over.